# ಹೋಮದ ಬಲವೊಂದಿದ್ದರೆ ಸಾಕು

'ಒಂದು ಹೋಮ ಮಾಡಿಬಿಡಿ. ಎಲ್ಲಾ ಸರಿಹೋಗುತ್ತೆ'– ಹೀಗೆ ಕನ್ನಡ ಚಿತ್ರರಂಗದ ಎರಡೂವರೆ ದಶಕದ ಅನುಭವಿ ನಟ ಈಗ ಮುಕ್ತವಾಗಿ ಸಲಹೆ ಕೊಡುತ್ತಿದ್ದಾರೆ. ಅವರು ಖುದ್ದು ರಾಘವೇಂದ್ರ ಸ್ವಾಮಿಯ ಪರಮಭಕ್ತರು. ತಮ್ಮ ಮಕ್ಕಳಿಗೆ ರಾಘವೇಂದ್ರರದ್ದೇ ಬೇರೆಬೇರೆ ನಾಮಗಳನ್ನು ಇಟ್ಟು ಖುಷಿಪಡುತ್ತಿದ್ದಾರೆ. ತಾವು ಚಿತ್ರ ನಿರ್ಮಿಸುವ ಬ್ಯಾನರ್‌ನ ಹೆಸರೂ ಅದೇ. ಅಚ್ಚುಕಟ್ಟಾಗಿ ಕುಂಕುಮವಿಟ್ಟುಕೊಂಡು ಎದುರಲ್ಲಿ ಮೇಜಿನ ಮೇಲೆ ಇರಿಸಿದ ಮದ್ಯದ ಗ್ಲಾಸಿಗೆ ಕಣ್ಣುಮುಚ್ಚು ನಮಸ್ಕರಿಸಿಯೇ ಪಾನಗೋಷ್ಠಿ ಪ್ರಾರಂಭಿಸುವ ಜಾಯಮಾನ ಅವರದ್ದು. ಸಿನಿಮಾ ಕುರಿತ ಚರ್ಚೆಯಲ್ಲಿ ಸಾಧ್ಯವಿದ್ದಾಗಲೆಲ್ಲಾ ತಮ್ಮ ಮನೆಯಲ್ಲಿ ನಡೆದ ಹೋಮಗಳ ಪ್ರಸ್ತಾಪ ಮಾಡುವುದು ಅವರಿಗೆ ಇಷ್ಟ.

ಈ ಇಷ್ಟಕ್ಕೆ ಸ್ಪಷ್ಟ ಕಾರಣವಿದೆ. ಅವರು ಮನೆಯವರನ್ನು ಎದುರು ಹಾಕಿಕೊಂಡು ಪ್ರೇಮವಿವಾಹವಾದದ್ದು. ಆಗ ಜೇಬಲ್ಲಿ ಬೈಟು ಕಾಫಿಗೂ ಕಾಸಿರುತ್ತಿರಲಿಲ್ಲ. ಪ್ರೀತಿಸಿದ ಹುಡುಗಿಯೇ ಹಣಕಾಸಿನ ವಿಷಯದಲ್ಲಿ ವಾಸಿ. ಇಬ್ಬರೂ ಅಷ್ಟೋಇಷ್ಟೋ ಹಣ ಕೂಡಿಟ್ಟರೆ ಹತ್ತುತ್ತಿದ್ದುದು ಮಂತ್ರಾಲಯದ ಬಸ್ಸನ್ನು ಅಥವಾ ರೈಲನ್ನು. ಅಲ್ಲಿ ರಾಯರ ಆಶೀರ್ವಾದ ಪಡೆದುಕೊಂಡ ಮೇಲೆ ತುಂಗಭದ್ರಾ ನದಿಯ ಅಲೆಗಳನ್ನು ನೋಡುತ್ತಾ ಕಾಣುತ್ತಿದ್ದದ್ದು ಸಿನಿಮಾ ಕನಸು. ತಮ್ಮದೇ ಬ್ಯಾನರ್ ಕಟ್ಟಿ, ಅದಕ್ಕೆ ರಾಯರದ್ದೇ ಹೆಸರನ್ನು ಇಡಬೇಕು ಎಂದುಕೊಂಡದ್ದು ಆಗಲೇ.

ಬದುಕಿನಲ್ಲಿ ಸಾಕಷ್ಟು ನೀರು ಹರಿಯಿತು. ನಾಯಕನಾದದ್ದೂ ಆಯಿತು. ಮದುವೆ, ಮಕ್ಕಳು; ಸಂಸಾರ ಬೆಳೆಯಿತು. ಹೊಸ ನಿರ್ದೇಶಕರಿಗೆ ಅವಕಾಶ ಕೊಡಿಸಿದ್ದು, ನಾಯಕಿಯರು ಸಿಗದೇಹೋದಾಗ ಪರದಾಡಿದ್ದು, ಸಣ್ಣ ಬಜೆಟ್‌ನ ಸಿನಿಮಾಗಳಲ್ಲೇ ಸುಖ ಕಾಣುತ್ತಾ ನಿಧನಿಧಾನವಾಗಿ ಬೆಳೆದದ್ದು ಎಲ್ಲವೂ ಆಯಿತು. ಇವೆಲ್ಲಾ ಸಂದರ್ಭಗಳಲ್ಲೂ ಆಗೀಗ ರಾಯರ ದರ್ಶನ ಆಗುತ್ತಲೇ ಇತ್ತು. ಆದರೆ, ಅಧ್ಯಾತ್ಮ ನೋಡನೋಡುತ್ತಲೇ ಹೋಮದ ಕಡೆಗೆ ಶಿಫ್ಟಾಯಿತು. ಬೆಂಗಳೂರಿನ ಅತಿ ತಂಪಿತ ಬಡಾವಣೆಯ ತಮ್ಮ ಮನೆಯ ಮೇಲಿನ ದೊಡ್ಡ ಹಾಲ್‌ನಲ್ಲಿ ನೂರಾರು ಹೋಮಗಳನ್ನು ಅವರು ನಡೆಸಿದ್ದಿದೆ. ಮೊನ್ನೆ ಮೊನ್ನೆ ಬಿಡುಗಡೆಯಾದ ಅವರ ಸಿನಿಮಾಗೆ ಮೊದಲ ಪೂಜೆ ನಡೆದದ್ದೂ ಹೋಮ ಮಾಡಿದ ಆ ಜಾಗದಲ್ಲೇ. ಹಿಂದೆ ನಿರ್ಮಿಸಿದ್ದ ಸಿನಿಮಾದಿಂದ ಹಣ ನಷ್ಟವಾಗಿತ್ತು. ಈಗ ಮೂವತ್ತು ಲಕ್ಷ ರೂಪಾಯಿಗೂ ಹೆಚ್ಚು ಲಾಭ ಬಂತು. ಅದಕ್ಕೆ ರಾಯರ ಆಶೀರ್ವಾದ, ಹೋಮಗಳ ಬಲವೇ ಕಾರಣ ಎಂಬುದು ಅವರ ನಂಬಿಕೆ.

ತಮ್ಮ ಈ ನಂಬಿಕೆಯನ್ನು ಅವರು ಇತ್ತೀಚೆಗೆ ಇನ್ನೊಬ್ಬ ಚಿತ್ರ ನಿರ್ಮಾಪಕರಿಗೂ ಹಂಚಿದರು. ಇವರು ಹೇಳಿದ ಹೋಮವನ್ನೇ ಅವರೂ ಮಾಡಿದರು. ತತ್ಪರಿಣಾಮವಾಗಿ ಬರೋಬ್ಬರಿ 15 ಕೋಟಿ ರೂಪಾಯಿ ಲಾಭ ಅವರಿಗೆ ಬಂದಿದೆಯಂತೆ. ಚಿತ್ರೋದ್ಯಮದ ಅನೇಕರು ಈಗ 'ಹೋಮದ ಬಲವೊಂದಿದ್ದರೆ ಸಾಕು' ಎಂದು ನಂಬಿರುವುದು ಸುಳ್ಳಲ್ಲ. ನೂರಾರು ಸಿನಿಮಾ ನಿರ್ಮಾಣದ ಹೋಮಕ್ಕೆ ಕೋಟಿಗಟ್ಟಲೆ ಸುರಿಯುತ್ತಿರುವ ಹೊತ್ತಲ್ಲೇ ಕಣ್ಣುಕೋರೈಸುತ್ತಿರುವ ಈ 'ಹೋಮಫಲ'ವನ್ನೇ ಇನ್ನೊಂದು ಸಿನಿಮಾ ಮಾಡಬಹುದಲ್ಲವೇ?

– ಎನ್ವಿ

Printed and Published by S.V. Srinivasan on behalf of **The Printers (Mysore) Private Ltd.** Printed at M/s. Rajhans Enterprises, no. 134, 4th main road, Industrial Town, Rajajinagar, Bangalore - 560044. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: **K.N. SHANTH KUMAR.**

Editorial Office: 75, M.G Road, Bangalore-560 001 E-mail:editormy@deccanherald.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited.RNI No 17129/68